# ಅಧ್ಯಾಯ –೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

# ಅಧ್ಯಾಯ : ೧

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಬೇಂದ್ರೆಯವರು ಹೊಸಗನ್ನಡ ಸಾಹಿತ್ಯದ ಅತ್ಯಂತ ಪ್ರತಿಭಾವಂತರಾದ ಶ್ರೇಷ್ಠ ಕವಿಯಾಗಿದ್ದಾರೆ. ಇವರು ಹೊಸಗನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಹೊಸ ಕಾವ್ಯ ಪರಂಪರೆಯ ಸೃಷ್ಟಿಗೆ ಕಾರಣರಾದರು. ಕನ್ನಡ ಸಾಹಿತ್ಯವನ್ನು ಸತ್ವ ವೈವಿದ್ಯಮಯವಾದ ಜೀವನ ದರ್ಶನ ಮತ್ತು ಕಾವ್ಯ ಸೌಂದರ್ಯದಿಂದ ಪುಷ್ಟಿಗೊಳಿಸಿದರು. ಕಾಲ ದೇಶಗಳನ್ನು ಮೀರಿ, ರಸಿಕರಿಗೆ ರಸದೌತಣವಾಗಿ, ವಿಮರ್ಶಕರಿಗೆ ಅನೇಕ ಸವಾಲುಗಳನ್ನು, ಹಲವಾರು ಕವಿಗಳಿಗೆ ನಿರಂತರ ಸ್ಫೂರ್ತಿಯನ್ನು ನೀಡುತ್ತಾ, ಅಗಾಧವಾದ ಅರ್ಥ ಸೂಕ್ಷ್ಮತೆಯನ್ನು ಹೊಂದಿರುವುದು ಬೇಂದ್ರೆಯವರ ಕಾವ್ಯದ ಪ್ರಮುಖ ಗುಣ ಮತ್ತು ವೈಶಿಷ್ಟ್ಯವಾಗಿದೆ. ಹಳೆಗನ್ನಡ ಕಾವ್ಯಗಳಲ್ಲೂ ಕಾಣದಿರುವ ಒಂದು ಬಗೆಯ ರಸಸಿದ್ದಿಯನ್ನು ನಾವು ಬೇಂದ್ರೆಯವರ ಕಾವ್ಯದಲ್ಲಿ ಕಾಣುತ್ತೇವೆ. ಹಾಗೂ ಇತ್ತೀಚಿನವರೆವಿಗೂ ಆ ಬಗೆಯ ಕಾವ್ಯ ಸಿದ್ದಿಯನ್ನು ಕನ್ನಡದಲ್ಲಿ ಕಾಣುವುದು ಅಪರೂಪವಾಗಿದೆ. "ಅಂಬಿಕಾತನಯದತ್ತರ ಕಾವ್ಯವು ಕನ್ನಡ ಕಾವ್ಯ ಮಾರ್ಗದ ಎಲ್ಲಾ ತಿರುವುಗಳಲ್ಲಿಯೂ (ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ ಇತ್ಯಾದಿ). ತೇಲುವ ಸಾಮರ್ಥ್ಯವನ್ನು ತೋರಿ ಒಂದು ಇತಿಹಾಸವನ್ನು ನಿರ್ಮಾಣ ಮಾಡಿದೆ. ಹಾರಬಲ್ಲ ಹಕ್ಕಿ, ಹಕ್ಕಿಯ ಗರಿ, ತೇಲುವ ವಸ್ತು ಯುಗಯುಗಳಲ್ಲಿ ಹಾದು, ಜಾಗತಿಕ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಶಾಶ್ವತವಾದ ಮುದ್ರೆಯನ್ನು ಬಿತ್ತುತ್ತದೆ. ಬೇಂದ್ರೆ ಕಾವ್ಯ ವಿವಿಧ ಪ್ರೇರಣೆಗಳಿಂದ ಪುಷ್ಟವಾಗಿದ್ದರೂ ಭಾರತೀಯ ಅರ್ಷಕಾವ್ಯ ಪರಂಪರೆಯನ್ನು ಅರಗಿಸಿಕೊಂಡು, ಆಧುನಿಕ ಯುಗಕ್ಕೆ ಅನುವಾಗುವಂತೆ ಇಟ್ಟ ಮುಂದಿನ ಹೆಜ್ಜೆಯಾಗಿದೆ"[೧] ಎಂದು ವಾಮನ ಬೇಂದ್ರೆಯವರು ಅಭಿಪ್ರಾಯಪಡುತ್ತಾರೆ. ಈ ಮಾತುಗಳಲ್ಲಿ ನಮಗೆ ಬೇಂದ್ರೆಯವರ ವಿರಾಟ್ ಪ್ರತಿಭೆಯ ದರ್ಶನವಾಗುತ್ತದೆ.

ವಸ್ತು ವೈವಿದ್ಯತೆ, ಜೀವನದ ಆಳವಾದ ಅನುಭವ; ಸಮಗ್ರವಾದ ತತ್ತ್ವ ಚಿಂತನೆ, ಅಪೂರ್ವವಾದ ಸುಂದರ ಕಾವ್ಯಾಭಿವ್ಯಕ್ತಿ, ಭಾಷೆಯ ಸಮರ್ಥ ಬಳಕೆ ಇವೆಲ್ಲವುಗಳಿಂದ ಬೇಂದ್ರೆ ಕಾವ್ಯ ಪೂರ್ಣ ದೃಷ್ಟಿಯ ಔನ್ನತ್ಯವನ್ನು ಸಾಧಿಸಿದೆ ಎಂದು ಹೇಳಬಹುದಾಗಿದೆ. ಈ ಎಲ್ಲಾ ಕಾರಣಗಳಿಂದಲೇ ಬೇಂದ್ರೆಯವರು ನಾದಕವಿ ಶಕ್ತಿಕವಿ, ಸಂವಾದ ಕವಿ, ಭೂಮಿ ಕವಿ, ಚಂಚಲತೆಯ ಕವಿ, ಸಾಂದರ್ಭಿಕ ಕವಿ, ಶ್ರಾವಣ ಪ್ರತಿಭೆಯ ಕವಿ ಎಂದೆಲ್ಲಾ ಕನ್ನಡ ಕಾವ್ಯ ಬಳಗದಿಂದ ಗುರುತಿಸಿಕೊಂಡಿದ್ದಾರೆ. ಬೇಂದ್ರೆಯವರ ಕಾವ್ಯ ಮಾಡುವ ಸಂಮೋಹನವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರನ್ನು; ಜಾದುಗಾರ, ಮಾಟಗಾರ, ಗಾರುಡಿಗ,

---

೧. ಔದುಂಬರಗಾಥೆ ಸಂಪುಟ ೧ ಪುಟ ೧೭

ಮಾಂತ್ರಿಕ, ಮೋಡಿಗಾರ ಎಂದೆಲ್ಲಾ ಪ್ರೀತಿಯಿಂದ ಕರೆದಿದ್ದಾರೆ. ಇಂತಹ ಮಹತ್ವದ ಕವಿಯಾದ ದ.ರಾ. ಬೇಂದ್ರೆ ಕಾವ್ಯದ ಅಧ್ಯಯನವು ಪ್ರತಿಯೊಬ್ಬರ ಮಾನಸಿಕ ಮತ್ತು ಬೌದ್ಧಿಕ ಹರಹನ್ನು ವಿಸ್ತೃತಗೊಳಿಸಿ, ಒಂದು ಉನ್ನತವಾದ ಸಂಸ್ಕಾರವನ್ನು ನೀಡುತ್ತದೆ ಎಂದು ಭಾವಿಸಿದ್ದೇನೆ.

ಬೇಂದ್ರೆಯವರ ಸಮಗ್ರ ಕಾವ್ಯವನ್ನು ಅಧ್ಯಯನ ಮಾಡುವಾಗ ನಮಗೆ ಗೋಚರವಾಗುವ ಒಂದು ಪ್ರಧಾನ ನೆಲೆ ಎಂದರೆ ಅವರ 'ಮಾತೃತ್ವದ ಪರಿಕಲ್ಪನೆ'. ಅವರ ಕಾವ್ಯದ ಸ್ಥಾಯಿಭಾವ ಮಾತೃತ್ವದ ಪ್ರಜ್ಞೆಯೇ ಆಗಿದೆ. ಅವರು ಮಾತೃ ಶಕ್ತಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ತಾಯಿ ಅಥವಾ ಹೆಣ್ಣು ಬೇಂದ್ರೆಯವರಿಗೆ ಎಂದೂ ಅಲಂಕರಣದ ವಿಷಯವಲ್ಲ, ಅಂತಃಕರಣದ ವಿಷಯ. ಅವರು ಎಂದೂ ಹೆಣ್ಣನ್ನು ಭೋಗದ ದೃಷ್ಟಿಯಿಂದ ನೋಡುವುದೇ ಇಲ್ಲ. ಬೇಂದ್ರೆಯವರಿಗೆ ಪ್ರೇಮದ ಪರಿಪೂರ್ಣವಾದ ರೂಪವೇ ತಾಯಿ ಅಥವಾ ಮಾತೃತ್ವ. ಅವರ ಕಾವ್ಯದಲ್ಲಿ ನಾವು ಗುರುತಿಸುವ ಸ್ತ್ರೀ ಪರವಾದ ನಿಲುವಿಗೆ ಮತ್ತು ಹೆಣ್ಣನ್ನು ಅತ್ಯಂತ ಉನ್ನತವಾದ ದೃಷ್ಟಿಯಿಂದ ನೋಡುವ ಮನೋಭಾವಕ್ಕೆ ಅವರಲ್ಲಿನ ಮಾತೃತ್ವದ ಒಲವೇ ಕಾರಣವಾಗಿದೆ.

"ದುಡಿದವರೆಗೆಲ್ಲಾ ಕೆಲಸವ ನೀಡು
ಹಸಿದವನಿಗೆ ಅನ್ನ,
ಹೆಣ್ಣಿಗೆ ಕೂಸಿಗೆ ಆಸರೆ ನೀಡು
ಈ ವಿದ್ಯೆಯೇ ಚೆನ್ನ" (ದರಿದ್ರ ನಾರಾಯಣ – ಕವನ)

ಇದು ಬೇಂದ್ರೆಯವರ ಜೀವನದ, ಕಾವ್ಯದ ಆಶಯ ಮತ್ತು ಆದರ್ಶವಾಗಿತ್ತು. 'ತಾಯಿ' ಬೇಂದ್ರೆಯವರ ಬದುಕಿನ, ಕಾವ್ಯದ ಎಲ್ಲಾ ಮಜಲುಗಳನ್ನು ಆವರಿಸುತ್ತ ಕೊನೆಗೆ ಇಡೀ ವಿಶ್ವವನ್ನೇ ವ್ಯಾಪಿಸುತ್ತಾ; ಪ್ರೀತಿ, ಮಮತೆ, ವಾತ್ಸಲ್ಯ ಮತ್ತು ಪೊರೆಯುವ ಶಕ್ತಿಯ ಪ್ರತೀಕವಾಗುತ್ತಾಳೆ. ಬೇಂದ್ರೆಯವರ ಕಾವ್ಯದಲ್ಲಿನ ಪ್ರಧಾನ ನೆಲೆಯಾದ ಮಾತೃತ್ವದ ಪರಿಕಲ್ಪನೆಯನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ನನ್ನ ಈ ಮಹಾ ಪ್ರಬಂಧದ ಉದ್ದೇಶವಾಗಿದೆ.

ಬೇಂದ್ರೆಯವರ ಕಾವ್ಯದ ಬಗೆಗೆ ಇದುವರೆಗೂ ನಡೆದಿರುವ ಅಧ್ಯಯನಗಳನ್ನು, ಸಂಶೋಧನೆಗಳನ್ನು ಗಮನಿಸಿದರೆ, ಅವುಗಳ ಅಧ್ಯಯನ ಸಾಮಾನ್ಯವಾಗಿ ಬೇಂದ್ರೆಯವರ ಸಮಗ್ರ ಕಾವ್ಯವನ್ನು ಕುರಿತದ್ದಾಗಿದೆ ಅಥವಾ ನಿರ್ದಿಷ್ಟವಾದ ಮತ್ತು ಸೀಮಿತವಾದ ಅಂಶಗಳನ್ನು ಕುರಿತದ್ದಾಗಿದೆ. ಇಲ್ಲವೇ ಅವರ ಕಾವ್ಯದಲ್ಲಿನ ಭಾಷೆ, ಛಂದಸ್ಸು, ನಾದ–ಲಯ, ಕಾವ್ಯ ಮೀಮಾಂಸೆ ಇತ್ಯಾದಿ ದೃಷ್ಟಿಕೋನಗಳಿಂದ ಅಧ್ಯಯನಗಳು ನಡೆದಿವೆ.

ಇನ್ನು ಬೇಂದ್ರೆಯವರ ಕಾವ್ಯದಲ್ಲಿನ ಪ್ರಕೃತಿ, ಭೂಮಿ, ಪ್ರೇಮ-ಕಾಮ, ಧರ್ಮ-ಅನುಭಾವ, ಸಾಮಾಜಿಕ ಪ್ರಜ್ಞೆ ಇತ್ಯಾದಿ ಮುಖಗಳ ಅಧ್ಯಯನ ರೂಪಗಳಾಗಿ ಬಿಡಿಲೇಖನಗಳು ಪ್ರಕಟಗೊಂಡಿವೆ. ಅವರ ಪ್ರಸಿದ್ಧವಾದ ಕವನಗಳನ್ನು ಕುರಿತು ಉತ್ತಮ ವಿಮರ್ಶೆಗಳು ಪ್ರಕಟವಾಗಿವೆ. ಅವರ ಒಟ್ಟು ಕಾವ್ಯವನ್ನು ಪ್ರಧಾನವಾಗಿಟ್ಟುಕೊಂಡು ಜಿ.ಎಸ್. ಆಮೂರ, ಕೀರ್ತಿನಾಥ ಕುರ್ತಕೋಟಿ, ಸಿಂಪಿ ಲಿಂಗಣ್ಣ, ಸುಮತೀಂದ್ರ ನಾಡಿಗ ಮುಂತಾದವರು ಮತ್ತು ವರಕವಿ ಡಾ. ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ ಅತ್ಯಂತ ಗುರುತರವಾದ ಅಧ್ಯಯನವನ್ನು ನಡೆಸಿವೆ. ಹಾಗೂ ಬೇಂದ್ರೆ ಕಾವ್ಯದ ಅಭಿನಂದನಾ ಗ್ರಂಥ 'ಇಳಿದು ಬಾ ತಾಯಿ' ಮತ್ತು ಬೇಂದ್ರೆಯವರ, "ಸಾಹಿತ್ಯದ ವಿರಾಟ್ ಸ್ವರೂಪ" ಮುಂತಾದವುಗಳು ಬೇಂದ್ರೆ ಕಾವ್ಯದ ಬಗೆಗಿನ ಅಧ್ಯಯನಕ್ಕೆ ಪ್ರಧಾನ ಆಕರ ಗ್ರಂಥಗಳಾಗಿವೆ. ಇವುಗಳೆಲೆಲ್ಲಾ ಬೇಂದ್ರೆಯವರ ಕಾವ್ಯದಲ್ಲಿನ ಮಾತೃತ್ವದ ಪರಿಕಲ್ಪನೆಯನ್ನು ಕುರಿತಂತೆ ವಿಮರ್ಶಕರು ಪ್ರಾಸಂಗಿಕವಾಗಿ ಗುರುತಿಸಿದ್ದಾರೆ. ಈ ಪರಿಕಲ್ಪನೆಯನ್ನು ಕುರಿತಂತೆ ಕೆಲವು ಬಿಡಿ ಲೇಖನಗಳು ಬಂದಿವೆ. ಆದರೆ ಬೇಂದ್ರೆಯವರ ಸಮಗ್ರ ಬದುಕು ಮತ್ತು ಕಾವ್ಯವನ್ನೆಲ್ಲಾ ಆವರಿಸಿಕೊಂಡಿರುವ, ಪ್ರಧಾನ ನೆಲೆಯಾಗಿ ಕಾಣಿಸಿಕೊಳ್ಳುವ, ಮಾತೃತ್ವದ ಪರಿಕಲ್ಪನೆಯನ್ನು ಕುರಿತಂತೆ ಸಮಗ್ರವಾದ ಒಂದು ಅಧ್ಯಯನವು ಇಲ್ಲಿಯವರೆಗೂ ಸಹ ನಡೆದಿರುವುದಿಲ್ಲ. ಅವರ ಕಾವ್ಯದಲ್ಲಿನ ಮಾತೃತ್ವದ ಪ್ರಜ್ಞೆಯ, ಪರಿಕಲ್ಪನೆಯ ಸೃಷ್ಟಿಗೆ ಕಾರಣಗಳೇನು, ಅದರ ಪ್ರಮುಖ ನೆಲೆಗಳೇನು, ಅದರ ಒಟ್ಟು ಸ್ವರೂಪವೇನು, ಮಾತೃತ್ವದ ಹಿಂದಿನ ತಾತ್ವಿಕತೆ ಯಾವುದು ಎಂಬ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಪ್ರಸ್ತುತ ಮಹಾಪ್ರಬಂಧದ ಉದ್ದೇಶವಾಗಿದೆ.

"ಕಾವ್ಯ ಕೇವಲ ಕವಿಯ ಕುಶಲಕರ್ಮವಾಗಿರದೇ ಅವನ ಒಳ ಬದುಕಿನ-ಅಂದರೆ, ಭಾವ ಪ್ರಪಂಚದ ಅಭಿವ್ಯಕ್ತಿಯಾಗಿರಬೇಕು" ಎಂದು ಬೇಂದ್ರೆಯವರು ಭಾವಿಸುತ್ತಾರೆ. ಹಾಗೆಯೇ ಅವರ ಸಮಗ್ರ ಕಾವ್ಯವು ಅವರ ಜೀವನದ ಭಾವ ಪ್ರಪಂಚದ ಅಭಿವ್ಯಕ್ತಿಯೂ ಆಗಿದೆ. ಅವರ ಜೀವನವು ಅವರ ಕಾವ್ಯದಷ್ಟೆ ತೆರೆದ ಪುಸ್ತಕ. ಅವರು ತಮ್ಮ ಬದುಕು, ಬರಹ, ಪ್ರಯತ್ನ, ಪ್ರತಿಭೆ, ವಿಚಾರ, ಅಭಿಪ್ರಾಯ ಯಾವುದನ್ನು ಮುಚ್ಚಿಡುವ ಪ್ರಯತ್ನವನ್ನು ಮಾಡಲಿಲ್ಲ. "ಪ್ರತಿಭಾವಂತ ಅನೇಕ ಕೈಗಳಿಂದ ಕೆಲಸ ಮಾಡುತ್ತಾನೆ" ಎಂಬ ಎಮರ್ಸನ್‌ನ ಅಭಿಪ್ರಾಯದಂತೆ ಬೇಂದ್ರೆಯವರು ಅನೇಕ ಮುಖಗಳಿಂದ ತಮ್ಮ ಕಾವ್ಯ ಪ್ರತಿಭೆಯನ್ನು ಅಭಿವ್ಯಕ್ತಿಸಿದರು. ಅವರ ಕಾವ್ಯದ ಮೂಲ ಸೆಲೆಯಾದ ತಾಯಿತನದ ನಿರಂತರ ನೆಲೆಯು ಅವರ ಕಾವ್ಯದಲ್ಲಿ ಸ್ಥಾಯಿಯಾಯಿತು. ಇದಕ್ಕೆ ಅವರ ತಾಯಿ, ಅಜ್ಜಿ, ಬಾಲ್ಯದ ಸಂಸ್ಕಾರ, ಹಲವು ಪ್ರೇರಣೆ-ಪ್ರಭಾವಗಳು ಕಾರಣವಾದವು. ಇವೆಲ್ಲವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ನನ್ನ ಪ್ರಬಂಧದ ವ್ಯಾಪ್ತಿಯೊಳಗಿನ ಭಾಗವಾಗಿದೆ.

ಬೇಂದ್ರೆಯವರ ಮೇಲಾದ ಭಾರತೀಯ ಸಂಸ್ಕೃತಿಯ ಪ್ರಭಾವವು; ಅವರೊಳಗಿನ ಮಾತೃತ್ವ ಪರಿಕಲ್ಪನೆಯು ಪೋಷಿತವಾಗಲು, ವಿಕಾಸಗೊಳ್ಳಲು ಮೂಲ ಸಾಮಾಗ್ರಿಯಾಯಿತು. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ ಅತ್ಯಂತ ಪೂಜ್ಯನೀಯಳು, ಉನ್ನತವಾದ ಸ್ಥಾನವುಳ್ಳವಳು ಆಗಿದ್ದಾಳೆ. ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಶಕ್ತಿ ದೇವತೆಗಳ ಮತ್ತು ಮಾತೃದೇವತೆಗಳ ಆರಾಧನೆ ನಡೆದುಕೊಂಡು ಬಂದಿದೆ. ಭಾರತೀಯ ಸಂಸ್ಕೃತಿಯನ್ನು ರೂಪಿಸುವಲ್ಲಿನ, ನಾಗರಿಕತೆಯನ್ನು ಬೆಳೆಸುವಲ್ಲಿ 'ತಾಯಿ' ಮಹತ್ವದ ಪಾತ್ರವನ್ನು ವಹಿಸಿದ್ದಳು. ವೇದಗಳ ಕಾಲದಲ್ಲಿ ತಾಯಿಯನ್ನು ದೈವಿಕ ನೆಲೆಯಿಂದ ಪರಿಭಾವಿಸಲಾಗುತ್ತಿತ್ತು. ಭೂಮಿಯನ್ನು ಮಾತೃ ರೂಪದಲ್ಲಿ ಭಾವಿಸಲಾಗುತ್ತಿತ್ತು. ಮಹಾ ಮಾತೆಯಾಗಿ, ಸ್ಥಿರವಾಗಿ ಫಲಭರಿತಳಾಗಿ, ತಾಳ್ಮೆ, ಕ್ಷಮಾಗುಣಗಳ ಪ್ರತೀಕವಾಗಿ ಮನುಷ್ಯನನ್ನು ಕಾಪಾಡುವವಳೆಂದು ಆರಾಧಿಸುತ್ತಿದ್ದರು. ಇಂತಹ ಭಾರತೀಯ ಸಂಸ್ಕೃತಿಯಲ್ಲಿ ಯಾವ ಕಾಲದಲ್ಲಿಯೂ ತಾಯಿಯನ್ನು ಕೀಳಾಗಿ ಕಾಣುತ್ತಿದ್ದಿಲ್ಲ. ವೈದಿಕೇತರ ನೆಲೆಯಲ್ಲಿ, ವೈದಿಕೇತರ ಧರ್ಮಗಳಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಚಿಂತಕರ ದೃಷ್ಟಿಯಲ್ಲಿ ಮಾತೃತ್ವದ ಪರಿಕಲ್ಪನೆಯನ್ನು – ಮಹಾ ಪ್ರಬಂಧದ ಅಧ್ಯಯನಕ್ಕೆ ಪೂರಕವಾಗಿ– ಮಾಡಬೇಕೆಂದು ನನ್ನ ಉದ್ದೇಶವಾಗಿದೆ. ಕಾರಣವೇನೆಂದರೆ, ಬೇಂದ್ರೆಯವರಲ್ಲಿ ಮಾತೃಭಕ್ತಿ ಮತ್ತು ಮಾತೃತ್ವದ ಪರಿಕಲ್ಪನೆಯು ರೂಪಗೊಳ್ಳಲು ಅವರ ಮೇಲೆ ಪ್ರಭಾವ ಬೀರಿದುದು, ಸಂಸ್ಕಾರ ರೂಪದಲ್ಲಿ ಬೇರೂರಿದುದು, ಭಾರತೀಯ ಸಂಸ್ಕೃತಿ ಮತ್ತು ಸನಾತನ ಪರಂಪರೆಯೇ ಆಗಿದೆ. ಬೇಂದ್ರೆಯವರು ಸಂಸ್ಕೃತಿ ಮತ್ತು ಪರಂಪರೆಯ ಸತ್ವವನ್ನೆಲ್ಲಾ ಗ್ರಹಿಸಿ, ಅದರ ಸಾರದ ಪುಷ್ಟಿಯಿಂದ ಕಾವ್ಯರಚನೆಯ ಕೈಂಕರ್ಯವನ್ನು ನಿರ್ವಹಿಸಿದರು.

ಎಲ್ಲಾ ಭಾಷೆಗಳ ಸಾಹಿತ್ಯಕ್ಕೆ ಮೂಲವಾಗಿರುವ ಜನಪದ ಸಾಹಿತ್ಯದಲ್ಲಿ ಮಾತೃತ್ವದ ಅಭಿವ್ಯಕ್ತಿಯನ್ನು ನನ್ನ ಮಹಾಪ್ರಬಂಧದಲ್ಲಿ ಪೂರಕ ಅಧ್ಯಯನವಾಗಿ ಬಳಸಿಕೊಂಡಿದ್ದೇನೆ. ಬೇಂದ್ರೆಯವರು ಜನಪದ ಸಾಹಿತ್ಯದಿಂದ ಪ್ರಭಾವಿತರಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಹಾಗಾಗಿ ಜನಪದ ಸಾಹಿತ್ಯದಲ್ಲಿನ ವಾತ್ಸಲ್ಯ ಭಾವದ ಅಧ್ಯಯನವು ನನ್ನ ಪ್ರಬಂಧದ ವ್ಯಾಪ್ತಿಯೊಳಗಿದೆ. ಒಟ್ಟಾರೆ 'ತಾಯಿತತ್ತ್ವ' ಎಂಬುದು ಭಾರತೀಯ ಸಂಸ್ಕೃತಿಯ ಆಧಾರಸ್ಥಂಭಗಳಲ್ಲೊಂದಾಗಿದೆ. ಬೇಂದ್ರೆಯವರ ಪ್ರಜ್ಞೆಯನ್ನು ಆವರಿಸಿಕೊಂಡ ಮಾತೃಶಕ್ತಿಯ ಅಧ್ಯಯನದ ಮೂಲಕ; ಅವರ ಮತ್ತು ಭಾರತೀಯ ಸಂಸ್ಕೃತಿಯ, ಪರಂಪರೆಯ ಸಂಬಂಧವನ್ನು ಅರಿಯಬಹುದಾಗಿದೆ. ಹಾಗಾಗಿ "ಭಾರತೀಯ ಸಂಸ್ಕೃತಿಯಲ್ಲಿನ ಮಾತೃತ್ವದ ಪರಿಕಲ್ಪನೆ" ಯನ್ನು ಹಿನ್ನಲೆಯಾಗಿ ಅಧ್ಯಯನ ಮಾಡುವುದು ಮಹತ್ವದ್ದೆಂದು ಭಾವಿಸುತ್ತೇನೆ. ಇದರಿಂದ ಬೇಂದ್ರೆಯವರ ಕಾವ್ಯದಲ್ಲಿನ ಮಾತೃತ್ವದ ಪರಿಕಲ್ಪನೆಯ ವಿಶ್ಲೇಷಣೆಗೆ ಸಹಾಯಕವಾಗುತ್ತದೆ. ಪರಂಪರೆಯಲ್ಲಿ ಬೇರು ಬಿಟ್ಟು, ನವೋದಯ ಸಂದರ್ಭದಲ್ಲಿ ಹೂ ಬಿಟ್ಟು, ಅದರ ಸುಗಂಧವನ್ನು ಕನ್ನಡ ಕಾವ್ಯದ ಭವಿಷ್ಯದಲ್ಲೆಲ್ಲಾ ಹರಡಿದ ದೈತ್ಯ ಪ್ರತಿಭೆಯ ವೃಕ್ಷವಾಗಿದ್ದಾರೆ ಬೇಂದ್ರೆಯವರು.

ಬೇಂದ್ರೆಯವರಲ್ಲಿ ಮಾತೃತ್ವದ ಪರಿಕಲ್ಪನೆಯು ಬೆಳೆಯಲು ಕಾರಣಗಳನ್ನು ವಿಶ್ಲೇಷಿಸುವಾಗ, ಅವರ ಕೌಟುಂಬಿಕ ಪರಿಸರದ ಅಧ್ಯಯನವು ಅತ್ಯಂತ ಮುಖ್ಯವಾದುದಾಗಿದೆ. "ಬೇಂದ್ರೆಯವರ ಕಾವ್ಯ ಸ್ತ್ರೀ ಪೋಷಿತವಾದುದು" ಎಂಬ ಅಭಿಪ್ರಾಯವಿದೆ. ಬಹಳ ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಬೇಂದ್ರೆಯವರು, ಸಂಪೂರ್ಣವಾಗಿ ಅಜ್ಜಿ ಗೋದೂಬಾಯಿ ಮತ್ತು ತಾಯಿ ಅಂಬಿಕೆಯ ಅಪಾರವಾದ ಮಮತೆ ಮತ್ತು ವಾತ್ಸಲ್ಯದಿಂದ ಪೋಷಿಸಲ್ಪಟ್ಟರು. ಪತಿಯನ್ನು ಕಳೆದುಕೊಂಡ ತಾಯಿ ಅಂಬಿಕೆಗೆ ಮಗನ ಪಾಲನೆ ಪೋಷಣೆಯೇ ಬದುಕಿನ ವ್ರತವಾಯಿತು. ಆಕೆಯ ವಾತ್ಸಲ್ಯವೇ ಬೇಂದ್ರೆಯವರ ಬದುಕಿನ ಸರ್ವಸ್ವವಾಗಿ ಆ ಮೂಲಕ ಆವಿರ್ಭವಿಸಿದ ಮಾತೃತ್ವದ ಸಂಸ್ಪರ್ಶವೇ ಅವರ ಕಾವ್ಯ ಧಾರೆಯ ಮೂಲ ಸೆಲೆಯಾಯಿತು. ಬಡತನ, ನೋವು-ಸಂಕಷ್ಟಗಳೆಲ್ಲಾ ಮಾತೃ ಪ್ರೇಮದಿಂದ ಪರಿಪಾಕಗೊಂಡು, ಒಂದು ಕಾವ್ಯ ಭೂಮಿಕೆ ಸಿದ್ಧವಾಗಿತ್ತು. ಬೇಂದ್ರೆಯವರು ತಮ್ಮ ಸಂಪೂರ್ಣವಾದ ಕಾವ್ಯ ಪ್ರತಿಭೆಯನ್ನು ಅದಕ್ಕೆ ಸಮರ್ಪಿಸಿಕೊಂಡರು. ಅವರ ಜೀವನದಲ್ಲಿ ಅವರ ತಾಯಿ ಅಂಬಿಕೆಯು ಅತ್ಯಂತ ವಿಶಿಷ್ಟವಾದ ಪಾತ್ರವನ್ನು ವಹಿಸುತ್ತಾರೆ. ಅವರ ಬದುಕಿಗೆ ಆಸರೆಯಾಗಿ, ಕಾವ್ಯಕ್ಕೆ ಸ್ಫೂರ್ತಿಯಾಗಿ, ಕಾವ್ಯ ಪ್ರೇಮಕ್ಕೆ ಒತ್ತಾಸೆಯಾಗಿ ನಿಲ್ಲುತ್ತಾರೆ. ಬೇಂದ್ರೆಯವರಲ್ಲಿ "ಹೆಣ್ಣು ಎನ್ನುವ ಮಾತು, ತಾಯಿ ಎನ್ನುವ ಮಾತು, ಎರಡಲ್ಲ ಒಂದೆಂದು ತಿಳಿಸಿದ"ವರು ಅವರ ತಾಯಿ. ಈ ಕಾರಣವಾಗಿಯೇ ಎಲ್ಲಾ ಹೆಣ್ಣುಗಳಲ್ಲಿಯೂ ತಾಯಿಯನ್ನೇ ದರ್ಶಿಸುವ ಮಾತೃ ಹೃದಯ ಬೇಂದ್ರೆಯವರದಾಯಿತು.

ಸೃಜನಶೀಲ ವ್ಯಕ್ತಿತ್ವವು "ತಾಯಿ ತತ್ತ್ವ" ವನ್ನು ಅವಲಂಬಿಸಿದೆ ಎಂದು ಬೇಂದ್ರೆಯವರು ಭಾವಿಸಿದ್ದರು. ಹಾಗೂ ಜೀವನದುದ್ದಕ್ಕೂ ತಮ್ಮ ಕಾವ್ಯ ಶೋಧದಲ್ಲಿ ಮಾತೃಶಕ್ತಿಯ ಶೋಧವನ್ನು ನಡೆಸಿದರು. ಅವರು ತಮ್ಮ ೭೫ನೇ ವಯಸ್ಸಿನಲ್ಲಿಯೂ "ಇನ್ನು ತಾಯಿ ತೋರುವ ಮುಖ ಎಲ್ಲಾ ಮುಗಿದೇ ಇಲ್ಲ ಅಂಬೋ ಹಾಗೆ ಕಾಣ್ತಾ ಇದೆ".[೨] ಎಂದು ಹೇಳುವುದರ ಮೂಲಕ ಮಾತೃತ್ವದ ಮೌಲ್ಯಾನ್ವೇಶಣೆಯ ತುಡಿತ ತಮ್ಮಲ್ಲಿ ಎಷ್ಟು ಆಪಾರವಾಗಿತ್ತೆಂಬುದನ್ನು ಸೂಚಿಸಿದ್ದಾರೆ. ಅವರು ಇಡೀ ತಮ್ಮ ಕಾವ್ಯ ಸೃಷ್ಟಿಯೇ ಮಾತೃದತ್ತವಾದುದೆಂದು ಭಾವಿಸುತ್ತಾರೆ. "ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ ! ಕಾಣಲಾರದೀ ಜಗ ॥" ಎಂದು ಮಾತೃತ್ವದ ಸಚೇತಕವಾದ ತಮ್ಮ ಕಾವ್ಯ ಪ್ರತಿಭೆಯನ್ನು ಕುರಿತು ಹೇಳುತ್ತಾರೆ. ತಮ್ಮ ವ್ಯಕ್ತಿತ್ವ, ಅಸ್ತಿತ್ವ ಮತ್ತು ಕಾವ್ಯತ್ವ ಎಲ್ಲವೂ ತಾಯಿ ಅಂಬಿಕೆಯಿಂದಲೇ ಸಿದ್ಧಿಸಿದ್ದೆಂಬ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಮೌಲ್ಯಾನ್ವೇಷಣೆ ಮತ್ತು ಕಾವ್ಯ ಸೃಷ್ಟಿ ಎರಡೂ ಒಂದೇ ಆಗಿ ಬಿಡುತ್ತದೆ. ಈ ಎಲ್ಲಾ ಅಂಶಗಳನ್ನು ಬೇಂದ್ರೆಯವರ ಜೀವನ ಮತ್ತು ಕಾವ್ಯದ ವಿವರಗಳ ಮೂಲಕ ಸಮಗ್ರವಾಗಿ ಅಧ್ಯಯನ

---

೨. ಸಾಹಿತ್ಯದ ವಿರಾಟ್ ಸ್ವರೂಪ, ಪುಟ ೫೦

ಮಾಡಿ, ಅವರ ಮಾತೃತ್ವದ ಪರಿಕಲ್ಪನೆಯ ವಿಕಾಸದ ಸ್ವರೂಪವನ್ನು ವಿಶ್ಲೇಷಿಸುವುದು ನನ್ನ ಮಹಾ ಪ್ರಬಂಧದ ಹರಹಿನೊಳಗಿನ ಅಂಶವಾಗಿದೆ.

ಸಮಗ್ರವಾದ ಮತ್ತು ಕ್ರಮಬದ್ಧವಾದ ಅಧ್ಯಯನಕ್ಕಾಗಿ ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆಯ ಕೆಲವು ಮುಖ್ಯ ನೆಲೆಗಳನ್ನು ಗುರುತಿಸಿಕೊಂಡಿದ್ದೇನೆ. ಅವರು ಜೀವನದ ವೈವಿಧ್ಯಗಳಿಗೆ ಮತ್ತು ವೈರುಧ್ಯಗಳಿಗೆ ತಮ್ಮನ್ನು ಮುಕ್ತವಾಗಿ ಒಡ್ಡಿಕೊಂಡು ಬದುಕಿಗೆ ಮುಖಾಮುಖಿಯಾದರು. ತಾವು ಪಟ್ಟ ಪಾಡೆಲ್ಲವೆನ್ನು ಹುಟ್ಟುಹಾಡಾಗಿಸಿದರು. ಈ ಎಲ್ಲಾ ಸಂದರ್ಭಗಳಲ್ಲಿ ಅವರ ವ್ಯಕ್ತಿತ್ವದ ಹಿಂದೆ. ಅವರ ಕಾವ್ಯ ತತ್ತ್ವದ ಹಿಂದೆ ಮಾತೃಶಕ್ತಿಯ ಕ್ರಿಯಾಶೀಲತೆಯನ್ನು ಕಾಣಬಹುದಾಗಿದೆ. ತಮ್ಮ ಕಾವ್ಯನಾಮವನ್ನೂ ತಾಯಿಯ ಹೆಸರಿನಿಂದಲೇ 'ಅಂಬಿಕಾತನಯದತ್ತ' ಎಂದು ಗುರುತಿಸಿಕೊಂಡು, ತಮ್ಮನ್ನು 'ಐದುಐದೆಯರ ಮಗ' ಎಂದು ಕರೆದುಕೊಂಡರು. ತಾಯಿಯ ಆಶೀರ್ವಾದದಿಂದಲೇ ಕಾವ್ಯದ ಕಾಣ್ಕೆ ಸಾಧ್ಯವಾಯಿತೆಂದು ಬೇಂದ್ರೆಯವರು ನಂಬುತ್ತಾರೆ. ತಾಯಿಯನ್ನು 'ಲಯದ ಬಸಿರಲ್ಲಿ ಸೃಷ್ಟಿಯ ಬೀಜವನ್ನು ಬಿತ್ತುವವಳು' ಎಂದು ಭಾವಿಸುತ್ತಾರೆ. ಹೀಗೆ ಮಾತೃತ್ವದ ಪರಿಕಲ್ಪನೆಯ ವಿಕಸನದಲ್ಲಿ ಅವರ 'ವೈಯಕ್ತಿಕ ನೆಲೆ'ಯು ಪ್ರಮುಖವಾದುದಾಗುತ್ತದೆ. ಬೇಂದ್ರೆಯವರ ಕಾವ್ಯ ಆಧ್ಯಾತ್ಮಿಕತೆಯತ್ತ ಮುಖಮಾಡಿದುದು, ಅವರ ಕಾವ್ಯದ ಸಂಕೀರ್ಣತೆಗೆ ಕಾರಣವಾಯಿತೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಆದರೆ ಬೇಂದ್ರೆಯವರೊಳಗಿನ ಮಾತೃತ್ವ ಪರಿಕಲ್ಪನೆಯ ಪರಿವೇಶವು ವಿಸ್ತಾರಗೊಳ್ಳಲು, ಅವರಲ್ಲಿ ಅಂತರ್ಗತವಾಗಿರುವ ಆಧ್ಯಾತ್ಮ ಪ್ರಜ್ಞೆಯು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಕಾವ್ಯಕ್ಕೆ ಅಗತ್ಯವಾಗಿದ್ದ, ಬದುಕಿನ ಬಗೆಗಿನ ಧ್ಯಾನಸ್ಥ ಮತ್ತು ಯೋಗಸ್ಥ ಸ್ಥಿತಿಗೆ ಇದು ಕಾರಣವಾಯಿತು. ಆ ಮೂಲಕ ತಮ್ಮ ಕಾವ್ಯವು ಅಧ್ಯಾತ್ಮಿಕ ದೀಕ್ಷೆಯನ್ನು ಪಡೆದುಕೊಳ್ಳುವ ಬಗೆಯನ್ನು ಸಾಧಿಸಿದರು. ಆಧ್ಯಾತ್ಮಿಕ ಚಿಂತನೆಯು ಅವರ ಕಾವ್ಯದ ಪ್ರಮುಖ ನೆಲೆಯಾಗಿ ಕೆಲಸ ಮಾಡಿದೆ. ಅದರ ವಿಸ್ತಾರವಾದ ಸ್ವರೂಪವನ್ನು ಅಧ್ಯಾಯನ ಮಾಡುವುದು ಮಹಾ ಪ್ರಬಂಧದ ವ್ಯಾಪ್ತಿಯೊಳಗಿನ ಅಂಶವಾಗಿದೆ. ಮಾತೃ ಆರಾಧಕ ಕವಿಯಾದ ಬೇಂದ್ರೆಯವರ ಪ್ರತಿಯೊಂದು ಕವನವೂ, ಅವುಗಳ ಆಂತರಿಕ ಸಫಲತೆಗಾಗಿ ಒಂದೊಂದು ದೇವತೆಗಳನ್ನು ಆರಿಸಿಕೊಂಡು ಮಾತೃತ್ವ ಪರಿಕಲ್ಪನೆಯನ್ನು ಬೆಳೆಸಿದುವು. ಇದನ್ನು ಸವಿಸ್ತಾರವಾದ ಅಧ್ಯಯನಕ್ಕೊಳಪಡಿಸುವ ಅಗತ್ಯವನ್ನು ಮನಗಂಡಿದ್ದೇನೆ.

ವಸಾಹತುಶಾಹಿ ಆಡಳಿತದ ಚಾರಿತ್ರಿಕ ಸಂದರ್ಭದಲ್ಲಿ ರಚಿತಗೊಳ್ಳುತ್ತಿದ್ದ ಬೇಂದ್ರೆಯವರ ಕಾವ್ಯವು, ಆ ಕಾಲದ ಅಗತ್ಯವಾಗಿದ್ದ ಕನ್ನಡ ನಾಡು ನುಡಿಯ, ರಾಷ್ಟ್ರೀಯತೆಯ ಕುರಿತು ಸ್ಪಂದಿಸುವುದು ಅನಿವಾರ್ಯವಾಗಿತ್ತು. ಬೇಂದ್ರೆಯವರ ಈ ಕುರಿತ ಸಂವೇದನೆಯು ಅತ್ಯಂತ ವಿನೂತನವಾಮದಾಗಿದೆ. ಅವರು ಮಾತೃತ್ವದ ನೆಲೆಯಿಂದ,

ಸಾಂಸ್ಕೃತಿಕವಾದ ಭಾವನಾತ್ಮಕವಾದ ನೆಲೆಯಿಂದ ಇವುಗಳನ್ನು ನೋಡಿದ್ದಾರೆ. ಬೇಂದ್ರೆಯವರು ಕನ್ನಡ ನಾಡು ನುಡಿಗೆ, ರಾಷ್ಟ್ರಪ್ರೇಮಕ್ಕೆ ಸಂಬಂಧಪಟ್ಟ ಎಲ್ಲಾ ಬಾಧ್ಯತೆಗಳಿಗೂ ಕರ್ತವ್ಯ ಪ್ರಜ್ಞೆಯಿಂದ ತಲೆಕೊಟ್ಟರು. ಕನ್ನಡದ, ಭಾರತದ ಬಗೆಗಿನ ಪ್ರೀತಿ-ಅಭಿಮಾನವನ್ನು ಮಾತೃತ್ವದ ನೆಲೆಯಿಂದ ಪರಿಭಾವಿಸಿದರು. ಕನ್ನಡಿಗರ ಭಾರತೀಯರ ನಡುವಿನ ಐಕ್ಯತೆಯ ಮಹತ್ವವನ್ನು ಗ್ರಹಿಸಿ; ಕನ್ನಡ ತಾಯಿಯ, ಭಾರತ ಮಾತೆಯ ' ತಾಯ ಸೆರೆ' ಯನ್ನು ಶತ್ರುಗಳ ವಿರುದ್ಧ ಹೋರಾಡಿ ಬಿಡಿಸಬೇಕು ಎಂದು ಭಾವಿಸಿದರು. ಇವರಿಬ್ಬರನ್ನು ತಮ್ಮನ್ನು ಸಂರಕ್ಷಿಸುವ ತಾಯಂದಿರನ್ನಾಗಿ ಕಂಡರು. ತಾಯ ಪ್ರೀತಿಯನ್ನು ಕಳೆದುಕೊಂಡ ಕನ್ನಡಿಗರ ಮತ್ತು ಭಾರತೀಯರ ನಿರ್ವೀರ್ಯತೆಯು ಬೇಂದ್ರೆಯವರ ಕೆಲವು ಕವನಗಳಲ್ಲಿ ವಿಶಿಷ್ಟವಾದ ರೀತಿಯಲ್ಲಿ ಚಿತ್ರಿತವಾಗಿವೆ. ಕನ್ನಡ ನಾಡುನುಡಿಯ ಮತ್ತು ರಾಷ್ಟ್ರೀಯತೆಯ ನೆಲೆಗಳಲ್ಲಿ ಬೇಂದ್ರೆಯವರ ಕಾವ್ಯದಲ್ಲಿ ಅರಳಿರುವ ಮಾತೃತ್ವ ಪರಿಕಲ್ಪನೆಯ ವಿಸ್ತಾರವನ್ನು ಅರಿಯುವುದು ಈ ಅಧ್ಯಯನಕ್ಕೆ ಅಗತ್ಯವೆಂದು ಭಾವಿಸಿದ್ದೇನೆ.

ಭೂಮಿತಾಯಿಯನ್ನು ಕುರಿತ ಬೇಂದ್ರೆಯವರ ಸಂವೇದನೆ ಮತ್ತು ಗ್ರಹಿಕೆಯು ಅತ್ಯುನ್ನತವಾದುದಾಗಿದೆ. ಅವರ ವ್ಯಕ್ತಿತ್ವವನ್ನು ವಿಶಿಷ್ಟವಾಗಿ ಪ್ರಭಾವಿಸಿದ ಒಂದು ಪ್ರಮುಖ ಸ್ಫೂರ್ತಿಯ ನೆಲೆಯಾಗಿದೆ. ಭೂಮಿಯನ್ನು ' ತಾಯಿ ' ಎಂದು ಪರಿಭಾವಿಸುವ ಮೂಲಕ ಮಾತೃತ್ವ ಪರಿಕಲ್ಪನೆಗೆ ಮತ್ತು ಭೂಮಿತಾಯಿಯನ್ನು ಕುರಿತ ಗ್ರಹಿಕೆಗಳಿಗೆ ಒಂದು ವಿಶಿಷ್ಟತೆ ಮತ್ತು ವಿಸ್ತೃತವಾದ ಹರಹು ದೊರಕಿತು. ಭೂಮಿ ತಾಯಿಯ ಅಪಾರವಾದ ಪ್ರೀತಿ ಮತ್ತು ವಾತ್ಸಲ್ಯಭಾವವು ಬೇಂದ್ರೆಯವರ ಮಾತೃ ಪ್ರಜ್ಞೆಯನ್ನು ಸಚೇತಕಗೊಳಿಸಿತು. ಬೇಂದ್ರೆಯವರು ಭೂಮಿತಾಯಿಯ ವಾತ್ಸಲ್ಯಮಯಿಯಾದ, ಕ್ಷಮೆಯ ಪ್ರತಿರೂಪವಾದ ಒಂದು ಮುಖ ಮತ್ತು ಹಿಂಸ್ರಕವಾದ ಒಂದು ಮುಖ- ಈ ಎರಡು ಮುಖಗಳನ್ನು ಕಾವ್ಯದ ಮೂಲಕ ದರ್ಶಿಸಿದ್ದಾರೆ. ಇವೆರಡರ ಅರಿವು ಭೂಮಿತಾಯಿಯ ಅಪಾರವಾದ, ಅಗಾಧವಾದ ಮಾತೃಶಕ್ತಿಯ ಕುರಿತದ್ದೇ ಆಗಿದೆ. "ಇಳೆಯೆಂದರೆ ಬರಿ ಮಣ್ಣಲ್ಲ. ನಮಗೋ ನೋಡುವ ಕಣ್ಣಿಲ್ಲ" ಎಂದು ಭೂಮಿತಾಯಿಯನ್ನು ಒಂದು ಅರ್ಥಪೂರ್ಣವಾದ ಪ್ರತೀಕವಾಗಿ, ಒಂದು ಭಾವನಾತ್ಮಕವಾದ ಆಕೃತಿಯಾಗಿ ಕಾಣುತ್ತಾರೆ. ಭೂಮಿ ತಾಯಿಯನ್ನು ಮತ್ತು ಹೆಣ್ಣನ್ನು ಹಲವು ಭಾವಗಳಲ್ಲಿ ಹೋಲಿಸುತ್ತಾರೆ. ಜನಪದ ಸಾಹಿತ್ಯದಲ್ಲಿಯೂ ಭೂಮಿ ತಾಯಿಯನ್ನು ಮಾತೃತ್ವದ ಹಿನ್ನಲೆಯಿಂದಲೇ ಗ್ರಹಿಸಲಾಗಿದೆ. ಈ ಜನಪದ ಶ್ರದ್ಧೆಯು ಬೇಂದ್ರೆಯವರ ಜೀವನ ಶ್ರದ್ಧೆಯೂ ಆಗಿದೆ. ಭೂಮಿ ತಾಯಿಯ ಚೆಲುವು, ವಾತ್ಸಲ್ಯಭಾವ ಮುಂತಾದುವುಗಳನ್ನಷ್ಟೇ ಹೇಳದೆ, ಆಕೆಯು ಮನುಷ್ಯರ ಸ್ವಾರ್ಥಲಾಲಸೆಯ ಶೋಷಣೆಗೆ ಬಲಿಯಾಗಿರುವ ಹಿಂಸಾತ್ಮಕವಾದ ಮುಖವನ್ನು ಚಿತ್ರಿಸುತ್ತಾರೆ. ಭೂಮಿತಾಯಿ ಮತ್ತು ಮನುಷ್ಯನ ಸಂಬಂಧ ತಾಯಿ ಮಗುವಿನ ಸಂಬಂಧವಾಗಬೇಕೆಂದು ಬಯಸುತ್ತಾರೆ.

ಅವಳ ಪ್ರಕೃತಿಯಲ್ಲಿ ಕಂಡು ಬರುವ ಸುಂದರವಾದ ಮಾತೃತ್ವದ ಚಿತ್ರವನ್ನು ಬೇಂದ್ರೆಯವರ ಪ್ರಕೃತಿ ಕವನಗಳಲ್ಲಿ ಕಾಣಬಹುದು. ಈ ಎಲ್ಲಾ ವಿವರಗಳು ಬೇಂದ್ರೆಯವರ ಮಾತೃ ಪ್ರಜ್ಞೆಗೆ ಸಾಕ್ಷಿಯಾಗಿರುವುದನ್ನು ವಿವರಿಸುವುದು ಪ್ರಸ್ತುತ ಮಹಾ ಪ್ರಬಂಧದ ಬದ್ದತೆಯೆಂದು ಭಾವಿಸಿದ್ದೇನೆ.

ಬೇಂದ್ರೆಯವರ ಕಾವ್ಯದ ಮಾತೃತ್ವದ ಪರಿಕಲ್ಪನೆಗೆ ಕಾರಣವಾದ ಅಧ್ಯಾತ್ಮಿಕ ಪ್ರೇರಣೆಗಳನ್ನು ಕೆಲವು ಮುಖ್ಯವಾದ ಅಂಶಗಳಿಂದ ಗುರುತಿಸಿಕೊಂಡಿದ್ದೇನೆ. ನಮಸ್ಕಾರ ಮುದ್ರೆ ಮತ್ತು ಸಪ್ತ ನಮಸ್ಕಾರಗಳ ಕಲ್ಪನೆಯು ಬೇಂದ್ರೆಯವರ ಮಾತೃತ್ವದ ನೆಲೆಯೊಳಗೆಯೇ ಬರುವಂತಹುದಾಗಿದೆ. 'ಸಪ್ತ ನಮಸ್ಕಾರಗಳಿ'ಗಾಗಿ ಸಪ್ತ ತಾಯಂದಿರನ್ನು ಗುರುತಿಸಿಕೊಳ್ಳುತ್ತಾರೆ. ಈ ಮಾತೃದೇವತೆಗಳಿಗೆ ನಮಿಸುವಲ್ಲಿ ಬೇಂದ್ರೆಯವರ ಮಾತೃ ಹೃದಯ ತಲ್ಲೀನತೆಯನ್ನು ಸಾಧಿಸುತ್ತದೆ. ಈ 'ಸಪ್ತ ನಮಸ್ಕಾರ'ವು ಅವರಲ್ಲಿ ಮಾತೃಭಕ್ತಿಯನ್ನು ಸಾಧಿಸಲು ಮಾತೃಶಕ್ತಿಗಳನ್ನು ಆರಾಧಿಸಲು ಅವರ ಮನಸ್ಸನ್ನು ಶಕ್ತವಾಗಿಸುತ್ತವೆ. ತಾಯಿ ಅಂಬಿಕೆಯ ವಾತ್ಸಲ್ಯವು ಬೇಂದ್ರೆಯವರು ಎಲ್ಲೆಲ್ಲೂ ತಾಯಿಯನ್ನು, ಮಾತೃತ್ವದ ಅನ್ವೇಷಣೆಯನ್ನು ಮಾಡುವಂತೆ ಮಾಡಿತು. ಆ ಪ್ರಜ್ಞೆಯು ಬೇಂದ್ರೆಯವರ 'ಐವರು ತಾಯಿಂದಿರ' ಕಲ್ಪನೆಯ ಸೃಷ್ಟಿಗೆ ಕಾರಣವಾಯಿತು. ಇಂತಹ ಒಂದು ಕಲ್ಪನೆಯನ್ನು ಇಡೀ ಭಾರತೀಯ ಸಾಹಿತ್ಯದಲ್ಲಿಯೇ ಎಲ್ಲಿಯೂ ಕಾಣಲು ಸಾಧ್ಯವಿಲ್ಲ. ಇದೊಂದು ವಿನೂತನವಾದ ಕಲ್ಪನೆಯಾಗಿದೆ. ಬೇಂದ್ರೆಯವರ ಮಾತೃತ್ವ ಪ್ರಜ್ಞೆಯ ಉತ್ತುಂಗ ಸ್ಥಿತಿಯಾಗಿದೆ. ಧಾರವಾಡವು ಬೇಂದ್ರೆಯವರ ಬದುಕಿನಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. ಧಾರವಾಡ ತಾಯಿಯು ಜೀವನದ ಎಲ್ಲಾ ಸಂದರ್ಭಗಳಲ್ಲಿಯೂ ಸಂರಕ್ಷಿಸಿದ್ದಾಳೆಂಬುದು ಬೇಂದ್ರೆಯವರ ಭಾವನೆ. ಆಕೆ ತಾಯಿತನ ನಡೆಸಿ, ಹಾಲು ಕುಡಿಸಿ, ಲಾಲಿ ಹಾಡಿ ಮಾತೃ ಪ್ರೀತಿಯನ್ನು ತೋರಿಸಿರುವಳೆಂದು ಭಾವಿಸುತ್ತಾರೆ. ತಮ್ಮ ಹಾಗೂ ಧಾರವಾಡದ ಸಂಬಂಧ 'ಹೊಕ್ಕಳು ಹುರಿಯ ಭಾವಬಂಧ' ಎಂದು ಅಭಿಪ್ರಾಯ ಪಡುತ್ತಾರೆ. ತಮ್ಮನ್ನು ಸಂಸ್ಕಾರ ಸಂಪನ್ನನನ್ನಾಗಿ ಮಾಡಿದ್ದು ಧಾರವಾಡ ಎಂಬುದು ಬೇಂದ್ರೆಯವರ ನಂಬಿಕೆ. ಹಾಗೇ ವಿಶ್ವಮಾತೆಯ ಕಲ್ಪನೆಯು ಬೇಂದ್ರೆಯವರ ಮಾನವತ ಪ್ರಜ್ಞೆಯು ಮನುಕುಲದ ಉದ್ಧಾರಕ್ಕಾಗಿ ಮಾಡುವ ಚಿಂತನೆಯಾಗಿದೆ. ಬೇಂದ್ರೆಯವರ ಕಾವ್ಯನಾಮದ ಹಿಂದೆ ಅವರ ಮಾತೃ ಪ್ರಜ್ಞೆಯು ಕೆಲಸಮಾಡಿದೆ. ಅದರ ಹಿಂದಿನ ಪ್ರಾತಿನಿಧಿಕ ಅರ್ಥ, ಅರ್ಥಪೂರ್ಣವಾದ ಉದ್ದೇಶ, ಕಾವ್ಯದಲ್ಲಿನ ಇದರ ಅಭಿವ್ಯಕ್ತಿ, ಅದರೊಳಗಿನ ಕಾವ್ಯಮಿಮಾಂಸೆಯ ವಿವರಣೆ ಇವೆಲ್ಲವುಗಳ ಅಧ್ಯಯನ ಅತ್ಯಂತ ಸ್ವಾರಸ್ಯಕರವಾದುದೆಂದು ಭಾವಿಸಿದ್ದೇನೆ.

ಬೇಂದ್ರೆಯವರ ಕಾವ್ಯದ ಮೇಲೆ ಶ್ರೀಮಾತಾರವಿಂದರ ದಟ್ಟವಾದ ಪ್ರಭಾವವಾಗಿರುವುದು ಎಲ್ಲರೂ ಗುರುತಿಸಿರುವ ವಿಷಯವಾಗಿದೆ. ಇದು ಬೇಂದ್ರೆಯವರ ಚಿಂತನೆಯನ್ನು ಬೆಳೆಸಿದೆ. ಅವರು ಶ್ರೀಮಾತರಲ್ಲಿ

ಮಾತೃತ್ವದ ಆಧಾರವನ್ನೇ ಕಂಡರು. ಇವರನ್ನು ಗುರುಪ್ರಧಾನರೆಂದು ಭಾವಿಸಿದರು. ಬೇಂದ್ರೆಯವರ ಮಾತೃತ್ವದ ಪರಿಕಲ್ಪನೆಗೆ ಇವರುಗಳ ಚಿಂತನೆಗಳಿಂದ ಪುಷ್ಟಿ ದೊರೆಯಿತು. ಇವರುಗಳ ಜೀವನ ಮತ್ತು ಕಾವ್ಯತತ್ತ್ವಗಳು. ಬೇಂದ್ರೆಯವರ ಮಾತೃಪ್ರಜ್ಞೆಯನ್ನು ಪೋಷಿಸಿವೆ. ಶ್ರೀಮಾತೆಯವರನ್ನು ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ ಎಂದು ಭಾವಿಸಿ, ಅವರ ಮಾತೃ ಪ್ರೀತಿಯ ಸ್ಪರ್ಶದಿಂದ ತಮ್ಮ ಕಾವ್ಯ ಮತ್ತು ಜೀವನ ಎರಡೂ ಔನ್ನತ್ಯವನ್ನು ಸಾಧಿಸುತ್ತದೆಂದು ಭಾವಿಸಿದ್ದರು. ಇವೆಲ್ಲವುಗಳನ್ನು ವಿವರವಾಗಿ ಅಧ್ಯಯನ ಮಾಡುವುದು, ಈ ಕುರಿತ ವಿಮರ್ಶಕರ ಅಭಿಪ್ರಾಯವನ್ನು ಪುನರ್‌ವಿಶ್ಲೇಷಣೆಗೆ ಒಳಪಡಿಸುವುದು ಮಹಾ ಪ್ರಬಂಧದ ವ್ಯಾಪ್ತಿಯಾಗಿದೆ.

ಬೇಂದ್ರೆಯವರು ಶಕ್ತಿಯ ಆರಾಧಕರು. ಅವರು ಮಾತೃಶಕ್ತಿಯ ಹಾಗೂ ಶಕ್ತಿದೇವತೆಗಳ ಕುರಿತಂತೆ ಅನೇಕ ಕವನಗಳನ್ನು ರಚಿಸಿದ್ದಾರೆ. ಈ ಶಕ್ತಿಗಳ ಆವಾಹನೆಯಿಂದಲೇ ತಮ್ಮ ಕಾವ್ಯ ಸೃಷ್ಟಿ ಸಾಧ್ಯವಾಯಿತೆಂದು ಭಾವಿಸುತ್ತಾರೆ. ಈ ಶಕ್ತಿ ದೇವತೆಗಳು ತಮ್ಮ ಉದ್ಧಾರಕ ಶಕ್ತಿಗಳೆಂದು ಭಾವಿಸುತ್ತಾರೆ. ಜೀವನದಲ್ಲಿ ಶಕ್ತಿಯ ಸೆಲೆ ಇರುವ ಎಲ್ಲ ಅನುಭವಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ. " ಮಾತೃ ಶಕ್ತಿಯು ಮೈಯನ್ನು ಪ್ರವೇಶಿಸಿದಾಗ ಬಿದಿರು ಕೊಳಲಾಗುತ್ತದೆ" ಎಂದು ಭಾವಿಸಿ, ಆ ಶಕ್ತಿಯ ಸಂರಕ್ಷಣೆಯಲ್ಲಿ ತಾವು ಸದಾ ಸುರಕ್ಷಿತ ಎಂದು ಭಾವಿಸುತ್ತಾರೆ. ಈ ದೇವತೆಗಳು ಬೇಂದ್ರೆಯವರೊಳಗಿನ ಆಸ್ತಿಕ ಪ್ರಜ್ಞೆಯನ್ನು ಮತ್ತು ಮಾತೃಪ್ರೇಮವನ್ನು ಬೆಳೆಸುತ್ತವೆ. ಅವರು ಈ ದೇವತೆಗಳ ಎದುರಿನಲ್ಲಿ ಭಕ್ತಿಯ ಪರವಶತೆಯಿಂದ ಶಿಶುಭಾವವನ್ನು ತಳೆದು ಆರಾಧಿಸುತ್ತಾರೆ. ತಾಯಿಯಾಗಿ ಸಲಹುವ ಈ ಶಕ್ತಿಗಳಿಗೆ ಬೇಂದ್ರೆಯವರು ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾರೆ. ಈ ಕವನಗಳಲ್ಲಿ ವ್ಯಕ್ತವಾಗುವ ಮಾತೃತ್ವದ ಪರಿಕಲ್ಪನೆಯನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಪರಿಮಿತಿಯೊಳಗಿನ ವಿಷಯವಾಗಿದೆ.

ತಾಯಿ ಮಕ್ಕಳ ಸಂಬಂಧ ಮನುಷ್ಯ ಪ್ರಕೃತಿಯಲ್ಲಿನ ಬಹಳ ದೊಡ್ಡ ಮೌಲ್ಯವಾಗಿದೆ. "ತಾಯಿ ಇದ್ದ ಕಾಲ ಬಾಲ್ಯವಲ್ಲದೆ ಏನು" ಎಂದು ಬೇಂದ್ರೆಯವರು ಬದುಕಿನುದ್ದಕ್ಕೂ ಮಾತೃಪ್ರೀತಿಯ ಸುಖವನ್ನು ಅನುಭವಿಸಿದರು. ಬೇಂದ್ರೆಯವರ ಮಾತೃಪ್ರಜ್ಞೆಯ ಕಿರೀಟವೆಂದರೆ ಅವರ 'ಕರುಳಿನ ವಚನಗಳು' ಮತ್ತು ವಾತ್ಸಲ್ಯ ಗೀತೆಗಳು. 'ಕರುಳಿನ ವಚನಗಳು' ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದವುಗಳಾಗಿವೆ. ಇಲ್ಲಿ ವಿಶೇಷವಾಗಿ ಅವರು ತಮ್ಮ ಬದುಕಿನಲ್ಲಿ ಕಂಡ ಕರುಳಕುಡಿಗಳ ಸಾವೇ ಕವನಗಳ ವಸ್ತುವಾಗಿದೆ. ಬೇಂದ್ರೆಯವರು ಪಡೆದ ಒಂಭತ್ತು ಮಕ್ಕಳಲ್ಲಿ ವಿಧಿಯ ಪಾಲಾದುದು ಆರು ಮಕ್ಕಳು. ಮೂವರು ಮಕ್ಕಳು ಜೀವಂತವಾಗಿ ಉಳಿದಿರುವುದೂ ತಮ್ಮ ತಾಯಿ ಅಂಬಿಕೆಯ, ಪಾರ್ವತಿಯ ಆಶೀರ್ವಾದದಿಂದಲೇ ಎಂದು ಭಾವಿಸಿದ್ದರು. (ಪಾಂಡುರಂಗ

ಬೇಂದ್ರೆ, ವಾಮನ ಬೇಂದ್ರೆ, ತ್ರಿಪುರ ಸುಂದರಿ(ಮಂಗಳಾ)- ಜೀವಂತವಾಗಿ ಉಳಿದ ಈ ಮೂರು ಮಕ್ಕಳ ಮೊದಲ ಅಕ್ಷರಗಳನ್ನು ಸೇರಿಸಿದರೆ 'ಪಾರ್ವತಿ' ಎಂಬ ಹೆಸರು ಸಿದ್ದಿಸುತ್ತದೆ.) ಇದು ಬೇಂದ್ರೆಯವರು ತಾಯಿಯಲ್ಲಿ ಕಂಡುಕೊಂಡ ಶಕ್ತಿಯಾಗಿದೆ. ಬೇಂದ್ರೆಯವರು ಮಕ್ಕಳ ಸಾವಾದಾಗ ಮಹಾ ಸಂಕಟದ ಸಮಯವನ್ನು ಎದುರಿಸಿದರು. ಆದರೂ ಮನಸ್ಸಿನ ಸೂಕ್ಷ್ಮತೆಯನ್ನು ಕಳೆದುಕೊಳ್ಳದೆ, ಬದುಕಿಗೆ ವಿಮುಖವಾಗದೆ, ನೋವನ್ನು ಕಾವ್ಯದ ಹದಕ್ಕೆ ಪಾಕಗೊಳಿಸಿದರು. ಸಾವಿನ ಬಗೆಗಿನ ತಿಳಿವು ಬೇಂದ್ರೆಯವರಲ್ಲಿ ಈ ದುಃಖವನ್ನು ಭರಿಸುವ ಸ್ಥೈರ್ಯವನ್ನು, ಸಾಮರ್ಥ್ಯವನ್ನು ತಂದುಕೊಟ್ಟಿತು. ತಾಯಿ ಮಗುವಿನ ಸಂಬಂಧ, ಮಕ್ಕಳ ಸೌಂದರ್ಯ, ಮಕ್ಕಳು ತಂದೆ ತಾಯಿಗಳಿಗೆ ತಂದು ಕೊಡುವ ತಾತ್ವಿಕವಾದ ತಿಳಿವು ಇವೆಲ್ಲವುಗಳ ಅಧ್ಯಯನದಿಂದ ಬೇಂದ್ರೆಯವರ ಮಾತೃತ್ವದ ಪರಿಕಲ್ಪನೆಯ ಬಗ್ಗೆ ವಿಶ್ಲೇಷಿಸುವ ಉದ್ದೇಶ ಈ ಪ್ರಬಂಧಕ್ಕಿದೆ. ಬೇಂದ್ರೆಯವರು ತಮ್ಮ ಕವನಗಳಲ್ಲಿ ವಾತ್ಸಲ್ಯಭಾವದ ಸಾಕಾರ ಲೋಕವನ್ನೇ ಸೃಷ್ಟಿಸಿದರು. ತಾಯ್ತನದ ಒಲುಮೆಯಲ್ಲಿ ದೈವತ್ವದ ಬೀಜವನ್ನು ಕಂಡರು. ಹೀಗೆ ವಾತ್ಸಲ್ಯರಸದ ನಿರೂಪಣೆಯಲ್ಲಿ ಬೇಂದ್ರೆಯವರ ಕಾವ್ಯ ಪ್ರತಿಭೆಯನ್ನು, ಮಾತೃತ್ವದ ಪ್ರಜ್ಞೆಯನ್ನು ಗುರುತಿಸುವುದನ್ನು ಪ್ರಸ್ತುತ ಪ್ರಬಂಧದದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಬೇಂದ್ರೆಯವರ ವಾತ್ಸಲ್ಯ ಗೀತೆಗಳಲ್ಲಿ ಕಾಣಿಸಿಕೊಳ್ಳುವ ಅನುಭಾವವು ಈ ಕವನಗಳ ಸೌಂದರ್ಯಕ್ಕೆ, ಮಾತೃತ್ವದ ನಿರೂಪಣೆಗೆ ಪೋಷಕವಾಗುತ್ತದೆ. ಮಕ್ಕಳ ಬಾಲಲೀಲೆ, ಸೌಂದರ್ಯ, ಮಗುವಿನ ಪ್ರಶ್ನೆಗಳು ಎಲ್ಲವೂ ತಾಯಿಯ ಅನುಭಾವ ಪ್ರಜ್ಞೆಯಲ್ಲಿ ಅನಾವರಣಗೊಳ್ಳುತ್ತದೆ. ಅವರ ವಾತ್ಸಲ್ಯ ಗೀತೆಗಳಲ್ಲಿ ಮಾತೃ ಪ್ರೀತಿಯ ಜೊತೆಗೆ, ಕಾವ್ಯಧರ್ಮ, ಧರ್ಮ, ಪುರಾಣಗಳೆಲ್ಲದರ ರಸಪಾಕವಿದೆ.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ; ಪ್ರತಿಯೊಬ್ಬ ವ್ಯಕ್ತಿಯಿಂದ, ಪರಂಪರೆಯಿಂದ, ಕಾವ್ಯ ಪರಂಪರೆಯಿಂದ, ಚಿಂತನೆಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಅನುಭವ ಮತ್ತು ಪ್ರಭಾವಕ್ಕೆ ಒಳಗಾಗಿರುತ್ತಾನೆ. ಅದು ಒಳ್ಳೆಯದ್ದೋ, ಕೆಟ್ಟದ್ದೋ ಅಂತಹ ಅನುಭವಗಳಿಂದ ನಮ್ಮ ಜೀವನ ದೃಷ್ಟಿಯ ವಿಕಾಸ, ನಮ್ಮ ನಿಲುವು ನಡೆಗಳು ರೂಪುಗೊಂಡಿರುತ್ತವೆ. ಒಂದರ್ಥದಲ್ಲಿ ಬದುಕು ಸರಳವೂ ಅಲ್ಲ, ಸಮತಟ್ಟು ಅಲ್ಲ. ವೈವಿಧ್ಯಮಯವಾದ ಪ್ರೇರಣೆ, ಪ್ರಭಾವ, ಅನುಭವಗಳ ಸಂಕೀರ್ಣ ಪಾಕ. ಈ ನಿಟ್ಟಿನಲ್ಲಿ ಬೇಂದ್ರೆಯವರ ಮೇಲಾದ ಪ್ರೇರಣೆ ಪ್ರಭಾವಗಳನ್ನು ಜನಪದ ಸಾಹಿತ್ಯ, ದಾಸರು, ರವೀಂದ್ರನಾಥ ಠಾಗೂರರಿಂದ ದೊರಕಿದ ಪ್ರೇರಣೆ ಮತ್ತು ಪ್ರಭಾವಗಳೆಂದು ಗುರುತಿಸಿಕೊಂಡಿದ್ದೇನೆ. ಈ ಪ್ರಭಾವವು ಬೇಂದ್ರೆಯವರ ಮಾತೃತ್ವ ಪರಿಕಲ್ಪನೆಯ ಪೋಷಣೆಗೆ ಪೂರಕವಾಗಿದೆ. ಇವುಗಳನ್ನು ವಿಸ್ತಾರವಾದ ಅಧ್ಯಯನಕ್ಕೆ ಒಳಪಡಿಸಲು ಉದ್ದೇಶಿಸಿದ್ದೇನೆ.

ಬೇಂದ್ರೆಯವರ ಮಾತೃತ್ವ ಪರಿಕಲ್ಪನೆಯ ಪ್ರಮುಖ ನೆಲೆಗಳನ್ನು ವಿಶ್ಲೇಷಿಸುವಾಗ, ಅದರ ಹಿಂದಿನ ತಾತ್ವಿಕತೆಯನ್ನು ಅಧ್ಯಯನ ಮಾಡುವಾಗ ಅವರ ಕೆಲವು ಕವನಗಳು ಪ್ರಾತಿನಿಧಿಕವಾಗುತ್ತವೆ ಮತ್ತು ಮುಖ್ಯವಾಗುತ್ತವೆ. ಅವರ ಮಾತೃತ್ವದ ಹಲವು ಮುಖಗಳನ್ನು ದರ್ಶಿಸುವ ಮುಖ್ಯ ಕವನಗಳನ್ನು ಸಮಗ್ರ ವಿಶ್ಲೇಷಣೆಗೆ ಒಳಪಡಿಸುವುದು ಅಧ್ಯಯನಕ್ಕೆ ಮಹತ್ವವನ್ನು ತಂದುಕೊಡುತ್ತದೆ. ಈ ನಿಟ್ಟಿನಲ್ಲಿ ಬೇಂದ್ರೆಯವರ ಮಾತೃತ್ವ ಪರಿಕಲ್ಪನೆಯ ಸ್ವರೂಪ, ಅವರ ಚಿಂತನೆಯ ಮತ್ತು ಪ್ರತಿಭೆಯ ಮೂಲಕ ಅರಳುವ ಮಾತೃತ್ವದ ಅನಾವರಣ, ಅವರ ಮಾತೃತ್ವದ ವಿಶಿಷ್ಟವಾದ ಸಂವೇದನೆ ಇವುಗಳನ್ನು ವಿವರವಾದ ಅಧ್ಯಯನದ ಮೂಲಕ ಗುರುತಿಸುವುದು ಸಾಧ್ಯವಾಗುವುದೆಂದು ಭಾವಿಸಿದ್ದೇನೆ.

ಎಲ್ಲ ಕಾಲದಲ್ಲೂ ಭಿನ್ನ ಭಿನ್ನ ಆಯಾಮಗಳೊಂದಿಗೆ ಅಧ್ಯಯನಕ್ಕೆ ಒಳಗಾಗುತ್ತಿರುವ ಬೇಂದ್ರೆಯವರ ಕಾವ್ಯದಲ್ಲಿನ 'ಮಾತೃತ್ವ ಪರಿಕಲ್ಪನೆ'ಯ ಪ್ರಸ್ತುತ ಅಧ್ಯಯನವು ಅತ್ಯಂತ ಮಹತ್ವಪೂರ್ಣವಾದುದೆಂದು ಭಾವಿಸಿದ್ದೇನೆ. ಹೆಣ್ಣಿನ ಎಲ್ಲ ರೂಪಗಳನ್ನು ತಾಯಿಯ ಮುಖದಿಂದಲೇ ದರ್ಶಿಸುವ ಬೇಂದ್ರೆಯವರು ಕನ್ನಡ ಕಾವ್ಯ ಪರಂಪರೆಯ ಪ್ರಮುಖರಾದ ಮಾತೃ ಆರಾಧಕರಾಗಿದ್ದು, ತಮ್ಮ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಬೇಂದ್ರೆಯವರ ಕಾವ್ಯದ ಅಧ್ಯಯನವು ಅಷ್ಟು ಸುಲಭವಾದ ಅಧ್ಯಯನವೇನಲ್ಲ. ಇದಕ್ಕೆ ಸಂಬಂಧಿಸಿದ ಮಂಗಳಾ ಪ್ರಿಯದರ್ಶಿನಿಯವರ ಮಾತುಗಳು ಮುಖ್ಯವೆನಿಸುತ್ತವೆ. " ಬೇಂದ್ರೆ ಕನ್ನಡ ಕಾವ್ಯ ಪರಂಪರೆಯ ಸತ್ವನ್ನು ಹೀರಿ ಬೆಳೆದು, ಏಕಕಾಲದಲ್ಲಿ ಅದರ ಬಹುಮುಖ್ಯ ಅಂಗವೂ ಆಗುತ್ತ, ಆದರಿಂದ ಸಿಡಿದು ತಮ್ಮ ವ್ಯಕ್ತಿ ವಿಶೇಷ ಗುಣಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ. ಅವರ ಕಾವ್ಯ ನೆಲದ ಅನುಭವಗಳು, ಜನಾಂಗದ ಸ್ಮೃತಿಗಳ ಮೂಲಕ ಒಂದು ಸಾಂಪ್ರದಾಯಿಕ ನೆಲೆಗಟ್ಟನ್ನು ಸಿದ್ಧಪಡಿಸಿಕೊಂಡಿತು. ಜೊತೆ ಜೊತೆಗೆ ಜನಪದದ ಆಶಯ, ಬಾಗು-ಬಳುಕುಗಳನ್ನು ಸಿದ್ಧಿಸಿಕೊಂಡಿತು. ಅವರ ಕಾವ್ಯದ ಅತ್ಯಂತ ಸಂಕೀರ್ಣವಾದ 'ಗುಣ' ಅರ್ಥೈಸಿಕೊಳ್ಳಲು ಹೋದಾಗ ಮುಷ್ಟಿಗೆ ಸಿಕ್ಕದೆ, ಅದರ ಹಾಗೇ ಬಿಡಲು ಹೋದರೆ ಕಾಡುವ ಶಕ್ತಿಯಾಗುತ್ತದೆ. ಅನುಭವದ ತೆಕ್ಕೆಗೆ ದಕ್ಕುವಂತೆ ತೋರಿದರೂ ಸಂಪೂರ್ಣವಾಗಿ ತನ್ನ ಗುಟ್ಟು ಬಿಡದೆ ಸಂಕೀರ್ಣವಾದ ನಿಗೂಢ ಜಗತ್ತಾಗುತ್ತದೆ".[೩] ಇದು ಬೇಂದ್ರೆಯವರ ಕಾವ್ಯದ ಅಧ್ಯಯನ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಅನುಭವಗಳಾಗಿವೆ. ಒಟ್ಟಾರೆ 'ಬೇಂದ್ರೆಯವರ ಕಾವ್ಯದಲ್ಲಿನ ಮಾತೃತ್ವದ ಪರಿಕಲ್ಪನೆ'ಯ ಅಧ್ಯಯನವು ಒಂದು ಮಹತ್ವಪೂರ್ಣ ಅಧ್ಯಯನವಾಗಿದೆ.

---

೩. ಬೇಂದ್ರೆ, ಡಿ.ಮಂಗಳ ಪ್ರಿಯದರ್ಶಿನಿ, ಪುಟ ೨